ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹುಣಸೂರು

**ಸಿ.ಸಿ.639/2019**

**ಸಿ.ಡಬ್ಲ್ಯೂ-1, ಪಿ.ಡಬ್ಲ್ಯೂ-1**

ದಿಃ **16.11.023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರು | ಮಾದೇಗೌಡ ಎಚ್.ಎಮ್. |
| ತಂದೆ/ಗಂಡನ ಹೆಸರು | ಲೇಟ್ ಎಚ್ ಮಾದೇಗೌಡ |
| ವಯಸ್ಸು | 61 ವರ್ಷ |
| ಕೆಲಸ | ನಿವೃತ್ತ ದಫೇದಾರ |
| ವಾಸಸ್ಥಳ | ಮೈಸೂರು |

<u>ಮುಖ್ಯ ವಿಚಾರಣೆ ಮಾನ್ಯ ಎ.ಪಿ.ಪಿ.ಯವರಿಂದ</u>

ನಾನು ದಿಃ ದಿಃ**2013** ರಿಂದ **2016** ರ ಜೂನ್ ರವರೆಗೆ ಬಿಳಿಕೆರೆ ಪೋಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ**09.04.2015** ರಂದು ನನಗೆ ರಾತ್ರಿ ಗಸ್ತು ಕರ್ತವ್ಯಕ್ಕೆ ನೇಮಕವಾಗಿದ್ದು, ತದನಂತರ ಚಾಸಾ-2 ರವರೊಂದಿಗೆ ರಾತ್ರಿ **10.30** ಗಂಟೆಯ ಸಮಯದಲ್ಲಿ ಠಾಣೆಯಿಂದ ಗಸ್ತು ಕರ್ತವ್ಯಕ್ಕೆ ಹೊರಟಿದ್ದು , ಬಿಳಿಕೆರೆ ಟೌನ್ ಕಡೆ ಗಸ್ತು ಮಾಡಿಕೊಂಡು ರಾತ್ರಿ **1.50** ಗಂಟೆ ಸಮಯದಲ್ಲಿ ಬಿಳಿಕೆರೆ ಟಒನ್ ನ ಸಂತೆಮಾಳದ ವಿ.ಎಸ್.ಎಸ್.ಎನ್ ಬ್ಯಾಂಕಿನ ಬಳಿ ಗಸ್ತು ಮಾಡುತ್ತಿದ್ದಾಗ ಒಬ್ಬ ಆಸಾಮಿಯು ನಮ್ಮ ಇರುವಿಕೆಯನ್ನು ನೋಡಿ ತನ್ನ ಇರುವಿಕೆಯನ್ನು ಮರೆಮಾಚಿಕೊಂಡು ಅನುಮಾನಸ್ಪದವಾಗಿ ಕೈಯಲ್ಲಿ ಒಂದು ಆಯುಧವನುನ ಹಿಡಿದುಕೊಂಡು ಓಡಾಡುತ್ತಿದ್ದನ್ನು. ಆತನನ್ನು ನಾನು ಮತ್ತು ಚಾಸಾ-2 ರವರು ವಿಚಾರಸಲಾಗಿ ಆರೋಪಿಯು ತೊದಲಿಸುತ್ತಾ, ಒಂದು ಸಾರಿ ಮನು, ಮತ್ತೊಂದು ಸಾರಿ ಮಂಜು ಎಂದು ಉತ್ತರಿಸಿದನು. ನಂತರ ಅವನ ವಿಳಾಸವನ್ನು ವಿಚಾರಿಸಲಾಗಿ ಒಂದು ಬಾರಿ ಮೈಸೂರು, ಮತ್ತೊಂದು ಬಾರಿ ಕೆ.ಆರ್. ನಗರ ಎಂದು ಉತ್ತರಿಸಿರುತ್ತಾನೆ. ಮತ್ತೊಂದು ಬಾರಿ ಅವನ ಸರಿಯಾದ ವಿಳಾಸವನ್ನು ವಿಚಾರಸಲಾಗಿ ಮಹೇಶ ಬಿನ್ ಲೇಟ್ ನಾರಾಯಣಗೌಡ, ಹುಣಸೂರು ತಾಲ್ಲೂಕು ಎಂದು ತಿಳಿಸಿರುತ್ತಾನೆ. ಆತನನ್ನು ಮುಂದಿನ ಕ್ರಮಕ್ಕಾಗಿ ಆಯುಧ ಸಮೇತ ಜೊತೆಯಲ್ಲಿಯೇ ಠಾಣೆಗೆ **2.20** ಸಮಯಕ್ಕೆ ಕರೆದುಕೊಂಡು

ಚಾಸಾ-7 ರವರ ಸಮಕ್ಷಮ ನಿವೇದಿಸಿರುತ್ತೇನೆ.

ಸದರಿ ಬಗ್ಗೆ ಲಿಖಿತ ದೂರನ್ನು ದಾಖಲಿಸಿ, ಸಕ್ಷಿ ದೂರಿನಲ್ಲಿರುವ ಸಹಿಯನ್ನು ಗುರುತಿಸಿರುತ್ತಾರೆ. ಸದರಿ ದೂರನ್ನು ನಿಪಿ-1 ಮತ್ತು ಅದರಲ್ಲಿರುವ ಸಹಿಯನ್ನು ನಿಪಿ-1(ಎ) ಎಂದು ಗುರುತಿಲಸಾಯಿತು.

ದಿಃ10.04.2015 ರಂದು ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ-7 ರವರಿಗೆ ಕೃತ್ಯ ನಡೆದ ಸ್ಥಳ ತೋರಿಸಿದ್ದು, ಚಾಸಾ-3 ಮತ್ತು 4 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.15 ರವರೆಗೆ ಮಹಜರ್ ಕ್ರಮ ಜರುಗಿಸಿ, ಅದನ್ನು ನಿಪಿ-2 ಎಂದು ಸಾಕ್ಷಿ ಮಹಜರ್ ನಲ್ಲಿರುವ ತಮ್ಮ ಸಹಿಯನ್ನು ಗುರುತಿಸಿದ್ದು ಅದನಉನ ನಿಪಿ-2(ಎ) ಎಂದು ಗುರುತಿಸಲಾಯಿತು. ಆರೋಪಿಯ ಬಳಿ ಇದ್ದ ಆಯುಧವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದು ನ್ಯಾಯಾಲಯದ ಮುಂದಿರುವ ಕಿರುಬೆರಳು ಗಾತ್ರದ ಸುಮಾರು 3 ಅಡಿ ಉದ್ದದ ಒಂದು ಕಬ್ಬಿಣದ ರಾಡ ಆಗಿರುತ್ತದೆ. ಅದನ್ನು ಮು.ಮಾ 1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈ ಸಮಯದಲ್ಲಿ ನ್ಯಾಯಾಲಯದಲ್ಲಿ ಹಾಜರಿಲ್ಲ ಎಂದು ನುಡಿದಿರುತ್ತಾರೆ. ಆರೋಪಿಯು ಗೈರು ಹಾಜರಿದ್ದು, ಆರೋಪಿ ಪರ ವಕೀಲರು ಇ.ಪಿ. ಹಾಕಿರುತ್ತಾರೆ.

<u>ಪಾಟೀಸವಾಲು ಆರೋಪಿ ಪರ ಶ್ರೀ ಟಿ.ಜಿ.ವಿ ವಕೀಲರಿಂದಃ</u>

ಆರೋಪಿ ಪರ ವಕೀಲರು ಹಾಜರಿದ್ದು, ಮಧ್ಯಾಹ್ನಕ್ಕೆ ಮುಂದೂಡಬೇಕೆಂದು ಕೋರಿದ ಮೇರೆಗೆ ಮಧ್ಯಾಹ್ನ 2.45 ಕ್ಕೆ ಮುಂದೂಡಲಾಯಿತು.

<u>ಪಾಟೀಸವಾಲು ಆರೋಪಿ ಪರ ಶ್ರೀ ಟಿ.ಜಿ.ವಿ ವಕೀಲರಿಂದಃ</u>

ಸಾಕ್ಷಿಯನ್ನು ಪುನಃ ಕರೆಯಲಾಗಿ ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. ಆರೋಪಿಪರ ವಕೀಲರು ಗೈರು ಹಾಜರಾದ ಕಾರಣ ಪಾಟೀಸವಾಲನ್ನು ಇಲ್ಲವೆಂದು ತೆಗೆದುಕೊಳ್ಳಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,
ಹುಣಸೂರು